**1 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಸಾಗರ**

**ಸಿಸಿ ನಂಬರು 512–2022**

**ಸಿಡಬ್ಲು –1, ಪಿಡಬ್ಲು – 1**

| | | |
|---|---|---|
| ಸಾಕ್ಷಿದಾರರ ಹೆಸರು | : | ಆನಂದ್ ನಾಯ್ಕು |
| ತಂದೆಯ ಹೆಸರು | : | ಶಿವಗಾರ್ ನಾಯ್ಕು |
| ವಯಸ್ಸು | : | 56 ವರ್ಷ |
| ಉದ್ಯೋಗ | : | ನಿವೃತ ಕಂದಾಯ ನಿರೀಕ್ಷಕರು |
| ವಾಸ | : | ಬೆಂಗಳೂರು. |

**ಪ್ರಮಾಣೀಕರಿಸಿದ ದಿನಾಂಕಃ 02.06.2026.**

**ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದಃ-**

1. ನಾನು 2012 ರಿಂದ 2022 ರವರೆಗೆ ಸಾಗರ ತಾಲ್ಲೂಕಿನ ಕಸಬಾ ಹೋಬಳಿಯಲ್ಲಿ ರಾಜಸ್ವ ಕಂದಾಯ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿಃ02.01.2021 ರಂದು ಬೇಳೂರು ಗ್ರಾಮದ ಸರ್ವೇ ಸಂಖ್ಯೆ 109 ಕ್ಷೇತ್ರ 11 ಎಕರೆ 30 ಗುಂಟೆ ಸ್ವತ್ತು ತ್ರೀ ರಾಮೇಶ್ವರ ದೇವರ ಹೆಸರಿಗೆ ಖಾತೆಯಾಗಿತ್ತು. ಈ ಜಮೀನಿನಲ್ಲಿ ಬೇಳೂರು ಗ್ರಾಮದ ನಿವಾಸಿಗಳಾದ ಅಣ್ಣಪ್ಪ, ಯಶೋಧಮ್ಮ, ಚೌಡಮ್ಮ, ದುರ್ಗಪ್ಪ, ನಾಗರಾಜ, ನಾರಾಯಣಪ್ಪ, ಮಂಜಪ್ಪ ಮತ್ತು ಕೃಷ್ಣಪ್ಪ ಇವರುಗಳು ಅಕ್ರಮವಾಗಿ ಒತ್ತುವರಿ ಮಾಡುತ್ತಿದ್ದಾರೆಂದು ನಮಗೆ ದೂರು ಬಂತು. ಅದರಂತೆ ನಾನು ಮತ್ತು ಚಾಸ 3 ಸ್ಥಳ ತನಿಖೆ ನಡೆಸಿ ಆರೋಪಿತರು ಒತ್ತುವರಿ ಮಾಡುತ್ತಿದ್ದಾರೆಂದು ಚಾಸ 2 ರವರಿಗೆ ನೀಡಿದೆವು.

3. ದಿಃ15.03.2021 ರಂದು ಚಾಸ 2 ರವರು ನನಗೆ ಒತ್ತುವರಿ ತೆರವುಗೊಳಿಸಬೇಕೆಂದು ಲಿಖಿತವಾಗಿ ಆದೇಶವನ್ನು ನೀಡಿದರು. ಚಾಸ 2 ರವರು ಒತ್ತುವರಿ ತೆರವುಗೊಳಿಸಬೇಕೆಂದು ಆರೋಪಿತರಿಗೆ ನೀಡಿದ ನೋಟೀಸನ್ನು ಆರೋಪಿತರಿಗೆ ಜಾರಿ ಮಾಡಿದೆವು.

4. ದಿಃ16.03.2021 ರಂದು ಚಾಸ 2 ಮತ್ತು 5 ರವರು ಸ್ಥಳ ಪರಿಶೀಲನೆಗೆಂದು ಬೇಳೂರು ಗ್ರಾಮದ ಸರ್ವೇ ಸಂಖ್ಯೆ 109 ಕ್ಕೆ ಬಂದರು.

ಸದರಿ ಸರ್ವೇ ಸಂಖ್ಯೆ 109 ರಲ್ಲಿ ಕೆಲವು ಜನ ಅಡಿಕೆ ಮತ್ತು ಬಾಳೆಯನ್ನು ಹಾಕಿರುವುದನ್ನು ಚಾಸ 2 ಮತ್ತು 5 ಗಮನಿಸಿ ಅದನ್ನು ತೆರವುಗೊಳಿಸಿದರು. ಅದೇ ದಿನ ಚಾಸ 2 ನನಗೆ ಆರೋಪಿತರ ವಿರುದ್ಧ ಒತ್ತುವರಿಗೆ ಸಂಬಂಧಿಸಿದಂತೆ ದೂರನ್ನು ದಾಖಲಿಸುವಂತೆ ನಿರ್ದೇಶನವನ್ನು ನೀಡಿದರು. ಆ ಪ್ರಕಾರ ನಾನು ಆರೋಪಿತರ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರನ್ನು ದಾಖಲಿಸಿದೆ.

5. ದಿಃ27.07.2021 ರಂದು ಸಾಗರ ಗ್ರಾಮಾಂತರ ಪೊಲೀಸರು ನಾನು ತೋರಿಸಿದ ಸ್ಥಳದಲ್ಲಿ ಚಾಸ 5 ಮತ್ತು 6 ರವರ ಸಮಕ್ಷಮ ಪಂಚನಾಮೆಯ ಕ್ರಮವನ್ನು ಮಧ್ಯಾಹ್ನ 1 ರಿಂದ 2 ಗಂಟೆಯವರಗೆ ಜರುಗಿಸಿ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಪಂಚನಾಮೆಯ ಕಾಲಕ್ಕೆ ಪೋಟೋವನ್ನು ತೆಗೆಯಲಾಗಿರುತ್ತದೆ.

6. ಸಾಕ್ಷಿಯು ಸ್ಥಳ ಪಂಚನಾಮೆಯನ್ನು ಮತ್ತು ಅದರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸ್ಥಳ ಪಂಚನಾಮೆಯನ್ನು ನಿಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಗ್ರಾಮ ಲೆಕ್ಕಾಧಿಕಾರಿ ವರದಿಯ ದೃಢೀಕೃತ ನಕಲನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 2 ಎಂದು ಗುರುತಿಸಲಾಯಿತು. ಸಾಕ್ಷಿಯು ದಿಃ15.03.2021 ರ ತಿಳುವಳಿಕೆ ಪತ್ರದ ದೃಢೀಕೃತ ನಕಲನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 3 ಎಂದು ಗುರುತಿಸಲಾಯಿತು. ಸಾಕ್ಷಿಯು ದಿಃ19.03.2021 ರ ಪಂಚನಾಮೆಯ ದೃಢೀಕೃತ ನಕಲನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 4 ಎಂದು ಗುರುತಿಸಲಾಯಿತು. ಸಾಕ್ಷಿಯು ದಿಃ05.01.2021 ರ ಪಂಚನಾಮೆಯ ದೃಢೀಕೃತ ನಕಲನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 5 ಎಂದು ಗುರುತಿಸಲಾಯಿತು. ಸಾಕ್ಷಿಯು ದೂರಿನ ಪ್ರತಿಯನ್ನು ಮತ್ತು ಅದರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ದೂರಿನ ಪ್ರತಿಯನ್ನು ನಿಪಿ 6 ಎಂದು, ಸಾಕ್ಷಿಯ ಸಹಿಯನ್ನು ನಿಪಿ 6(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು 12 ಛಾಯಾಚಿತ್ರಗಳಲ್ಲಿ ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿದ್ದು, 12 ಛಾಯಾಚಿತ್ರಗಳನ್ನು ನಿಪಿ 7 ರಿಂದ 18 ಎಂದು ಗುರುತಿಸಲಾಯಿತು. ಬೇಳೂರು ಗ್ರಾಮದ ಸರ್ವೇ ಸಂಖ್ಯೆ 109 ನ್ನು ಒತ್ತುವರಿ ಮಾಡಿರುವ ಒತ್ತುವರಿದಾರರನ್ನು ನೋಡಿದರೆ ಗುರುತಿಸುತ್ತೇನೆ.

ಈ ದಿನ ನ್ಯಾಯಾಲಯದ ಮುಂದೆ 4 ಜನರು ಆರೋಪಿತರ ಸ್ಥಾನದಲ್ಲಿ ಇರುತ್ತಾರೆ, ಅವರ ಹೆಸರುಗಳು ನನಗೆ ಗೊತ್ತಾಗುವುದಿಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ರೂ.1000/- ಗಳ ವೆಚ್ಚ ಸಹಿತ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ರೀತ್ಯಾ ಗಣಕೀಕರಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಸಾಗರ